ಶ್ರೀ ಕೆ. ಪಂಚಾಕ್ಷರಯ್ಯ.—ಎಷ್ಟನೆಯ ಇನಪಿಯಲ್ಲಿ ಈ ಲೆಕ್ಕಗಳನ್ನು ತೆಗೆದುಕೊಂಡದ್ದು ?

ಡಾ॥ ಆರ್. ನಾಗನಗೌಡ.—ರೆಗ್ಯುಲೇಟೆಡ್ ಮಾರ್ಕೆಟ್ ಮಾಡಿರುವ ಕಾಲದಲ್ಲಿ ಈ ಸಂಖ್ಯೆಯನ್ನು ಕೂಡಿಸಿದ್ದಾರೆ.

ಶ್ರೀ ಕೆ. ಪಂಚಾಕ್ಷರಯ್ಯ.—ತೆಂಗಿನಕಾಯಿ ಬೆಳೆಯನ್ನು ಹೆಚ್ಚಿಸಲು ತೆಂಗಿನ ಒಟ್ಟಲಿನ ಯೋಜನೆಯನ್ನು ಜಾರಿಯಲ್ಲಿ ತರಲಾಗಿದೆ, ಅದರಂತೆ ಬೆಳೆಯುವವರಿಗೆ ಒಳ್ಳೆಯ ಸಸಿಗಳನ್ನು, ಸಸಿ ಒಂದಕ್ಕೆ ಎಂಟಾಣೆಯ ಸುಲಭ ಬೆಲೆಗೆ ಮಾರಲಾಗುತ್ತಿದೆ ಎಂದು ಹೇಳಿದ್ದೀರಿ ; ಅರಸೀಕೆರೆ ತಾಲ್ಲೂಕಿನಲ್ಲಿ ಎಲ್ಲಿ ಮಾರಾಟ ಕ್ಕಿಟ್ಟಿದ್ದಾರೆ ?

ಡಾ॥ ಆರ್. ನಾಗನಗೌಡ.—ಸಸಿಗಳನ್ನು ಹೆಬ್ಬಾಳಿನಲ್ಲಿ ಮಾರುತ್ತಿದ್ದಾರೆಂದು ನನಗೆ ಪ್ರಾಪ್ತಿಪಕವಿದೆ. ಈಗ ಅಲ್ಲಿ ಅರಸೀಕೆರೆ ತಿಪಟೂರಿನಲ್ಲಿಯೂ ಏರ್ಪಾಡು ಮಾಡಿದ್ದಾರೆಂದು ಕಾಣುತ್ತದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕೆರೆಯಿಂದ ಹೆಬ್ಬಾಳಿಗೆ ಬಂದು ತೆಗೆದುಕೊಂಡು ಹೋಗಬೇಕೇ ? ವರ್ಷ ವರ್ಷವೂ ಎಷ್ಟು ತೆಗೆದುಕೊಂಡು ಹೋಗುತ್ತಾರೆ?

ಡಾ॥ ಆರ್. ನಾಗನಗೌಡ.—Research Station ನಲ್ಲಿ ಮಾಡುವುದು. ಅಲ್ಲಿ ಇಪ್ಪತ್ತೆಂಟು ಸಾವಿರಕ್ಕೆ ಮೇಲ್ಪಟ್ಟು ಮಾರಾಟ ಮಾಡಿದ್ದೇವೆ.

ಶ್ರೀ ಕೆ. ಪಂಚಾಕ್ಷರಯ್ಯ.—ಎಷ್ಟು ವರ್ಷಕ್ಕೆ ?

ಡಾ॥ ಆರ್. ನಾಗನಗೌಡ.—ಇಂದಿನವರೆಗೆ ಮಾರಾಟ ಮಾಡಿದ್ದು ಇಪ್ಪತ್ತೆಂಟು ಸಾವಿರ.

ಶ್ರೀ ಎಲ್. ಸಿದ್ದಪ್ಪ.—ಮೊದಲು ಅರಸೀಕೆರೆಯ ಹತ್ತಿರ seedling farm ಒಂದನ್ನು ಸ್ಥಾಪನೆ ಮಾಡಿದ್ದದು ನಿಜವೆ ?

ಡಾ॥ ಆರ್ ನಾಗನಗೌಡ.—ನೋಟೀಸ್.

ಶ್ರೀ ಎಚ್. ಸಿ. ಲಿಂಗದೇವರು.—ಅರಸೀಕೆರೆಯಲ್ಲಿ ಮೊದಲು ಇಟ್ಟಿದ್ದುದು ನಿಜವಲ್ಲವೆ ?

ಡಾ॥ ಆರ್. ನಾಗನಗೌಡ.—ನೋಟೀಸ್. The information that I have is this. Quality seedlings are grown in the nurseries at Hebbal, Mandya and Hiriyur.

ಶ್ರೀ ಪೈ. ಎಂ. ಚಂದ್ರಶೇಖರಯ್ಯ.—ಮೊದಲು ಅರಸೀಕೆರೆಯೆಲ್ಲದ್ದದ್ದಕ್ಕೆ ಕಡೂರು ತಾಲೂಕು ಸೇರಿರಲಿಲ್ಲವೆ ?

ಡಾ॥ ಆರ್. ನಾಗನಗೌಡ.—ನೋಟೀಸ್. To say whether the area population includes Kadur, I want notice.

ಶ್ರೀ ಪೈ. ಎಂ. ಚಂದ್ರಶೇಖರಯ್ಯ.—ತೆಂಗಿನ ಬೆಳೆಗೆ ರೋಗ ಜಾಸ್ತಿಯಾಗುತ್ತಿದೆ. ದೇಶಾದ್ಯಂತ ಇದರ ಸರ್ವೆಮಾಡಿಸಿದ್ದೀರಾ ?

ಡಾ॥ ಆರ್. ನಾಗನಗೌಡ.—ಅಣಬೆ ರೋಗಕ್ಕೆ ಒಂದು ದಾರಿಯನ್ನು ಹೇಳಿದ್ದೇವೆ. Sulphur ಉಪಯೋಗಿಸುವುದು. ಇದು ಸರಿಯಾಗಿ ಕೆಲಸ ಮಾಡುತ್ತದೆಯೆ ಎಂದು ನೋಡುತ್ತಿದ್ದಾರೆ.

ಶ್ರೀ ಪೈ. ಎಂ. ಚಂದ್ರಶೇಖರಯ್ಯ.—ಸರ್ವೆ ಮಾಡಿಸಲು ಕೈಕೊಳ್ಳುತ್ತೀರಾ ?

ಡಾ॥ ಆರ್. ನಾಗನಗೌಡ.—ಸರ್ವೆ ಮುಖ್ಯವಲ್ಲ, ರೋಗನಿವಾರಣೆ ಮಾಡುವುದಕ್ಕೆ ದಾರಿ ಕಂಡುಹಿಡಿಯುವುದು ಮುಖ್ಯ ; ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಪೈ. ಎಂ. ಚಂದ್ರಶೇಖರಯ್ಯ.—ಅಲ್ಲಿ ಸೊಸೈಟಿಯಲ್ಲಿ ಔಷಧ ನಮ್ಮಲ್ಲಿಲ್ಲ ಎಂದು ಹೇಳಿದುದು ಗೊತ್ತಿದೆಯೆ ?

ಡಾ॥ ಆರ್. ನಾಗನಗೌಡ.—ಹಾಗಿದ್ದರೆ ನಾವು ಕೊಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ತಿಪಟೂರು ತಾಲ್ಲೂಕಿನಲ್ಲಿ ಅಣಬೆ ರೋಗಕ್ಕೆ ಏನೂ ಮಾಡಿಲ್ಲ, ಕಾರಣವೇನು ?

ಡಾ॥ ಆರ್. ನಾಗನಗೌಡ.—ಆ ರೋಗವನ್ನು ನಿರ್ಮೂಲಮಾಡಬೇಕಾದರೆ ರೋಗ ತಗಲಿದ ಗಿಡವನ್ನು ಬೇರು ಸಹಿತ ತೆಗೆಯಬೇಕು ; ಆದರೆ ಇದಕ್ಕೆ ಯಾರೂ ಒಪ್ಪುವುದಿಲ್ಲ. ಅಲ್ಲದೆ ಔಷಧವನ್ನೂ ತೆಗೆದುಕೊಳ್ಳುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಅಲ್ಲಿ ಎರಡು ತೋಟಗಳು ಪೂರ್ತಿಯಾಗಿ ಹೋಗಿವೆ ಈ ರೋಗದಿಂದ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಡಾ॥ ಆರ್. ನಾಗನಗೌಡ.—ಔಷಧ ಈಗ ಇಟ್ಟಿರುವುದು sulphur. ಅದನ್ನು ಹಾಕಬೇಕು. It is still in an experimental stage. It is not still so good or effective.

ಶ್ರೀ ಬಿ. ಹುಚ್ಚೇಗೌಡ.—ಅದಷ್ಟು ಜಾಗ್ರತೆ ಈ ರೋಗವನ್ನು ತೊಡೆದು ಹಾಕಲು ಪ್ರಯತ್ನಮಾಡುತ್ತಿರಾ ? ಎರಡು ತೋಟಗಳು ಪೂರ್ತಿ ಹೋಗಿವೆ.

ಡಾ॥ ಆರ್. ನಾಗನಗೌಡ.—ಎಲ್ಲಾದರೂ ಈ ರೋಗ ಬಂದಿದ್ದರೆ ಪೂರ್ತಿ ಗಿಡವನ್ನು ತೆಗೆಯರಿ ಎಂದು ಹೇಳಿದರೆ, ರೈತರು ತೆಗೆಯುವುದಿಲ್ಲ. ಏನಾದರೂ ಕಾನೂನು ಮಾಡಿದರೆ ಸರಿಹೋಗುತ್ತದೆಯೋ ಏನೋ ಯೋಚನೆ ಮಾಡುತ್ತಿದ್ದೇವೆ.

Electricity (Supply to Irrigation pumps in Somanahally and other villages in Bangalore South Taluk.)

Q.—169. Sri A. V. NARASIMHA REDDY (Bangalore South).—

Will the Government be pleased to state :—

(*a*) whether an estimate is prepared to supply electricity to irrigation pump sets to Somanahalli and surrounding villages in Uttarahally Hobli, Bangalore South Taluk ;

(*b*) the estimated amount ;

(*c*) when it was prepared ;

(*d*) the average return it brings ?

A.—Dr. R. NAGAN GOWDA (Minister for Agriculture).—

(*a*) An estimate is prepared only in the case of the surrounding villages, *viz.*, Kaglipur and Taralu.

(*b*) Rs. 80,050.

(*c*) May 1954.

(*d*) About 2·7 per cent.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇದರ ಸಂಬಂಧದಲ್ಲಿ 80,050 ರೂಪಾಯಿಗಳಿಗೆ ಒಂದೇ ಅಂದಾಜು ಮಾಡಿಸಿದ್ದೀರೋ ಅಥವಾ ಬೇರೆ ಬೇರೆ ಅಂದಾಜುಗಳನ್ನು ಮಾಡಿಸಿದ್ದಿರೋ ?

*ಡಾ॥ ಆರ್. ನಾಗನಗೌಡ.—ಸೋಮನಹಳ್ಳಿಗೆ ಕರೆಂಟ್ ಹೋಗುವುದಕ್ಕಿಂತ ಮುಂಚೆ ಕಗ್ಗಲಿಪುರಕ್ಕೆ ಹಾಕಬೇಕೆಂದು ಮಾಡಿದ್ದೆವು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗಾದರೆ ಕಗ್ಗಲೀಪುರಕ್ಕೆ ವಿದ್ಯುಚ್ಛಕ್ತಿ ಲೈನ್ ಮಂಜೂರು ಮಾಡಿದ್ದೀರಾ?

ಡಾ॥ ಆರ್. ನಾಗನಗೌಡ.—ಬರುವ financial yearನಲ್ಲಿ ಮಾಡಬೇಕೆಂದಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಂದಾಜಿನಲ್ಲಿ ಕೇವಲ ಎಲೆಕ್ಟ್ರಿಕ್ ಲೈನಿಗೆ ಎಂದಿದೆ. ನೀರಾವರಿ ಪಂಪುಗಳಿಗೆ ಬೇರೆ ಅಂದಾಜಿದೆ ಎಂದು ಹೇಳಿದ್ದಿರೇಕೆ?

ಡಾ॥ ಆರ್. ನಾಗನಗೌಡ.—Average return ಕೇಳಿದ್ದಿರಿ, ಅದನ್ನು ಕೊಟ್ಟಿದ್ದೇವೆ; 2·7 per cent. But as it is, that is not the basis on which it is worked; we are working on the cost per H.P. We gave the reply you wanted.

ಶ್ರೀ ಎ. ವಿ. ನರಸಿಂಹರೆಡ್ಡಿ.—ಎಷ್ಟು ನೀರಾವರಿ ಪಂಪುಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಹೇಳಿದ್ದಾರೆ?

Dr. R. NAGAN GOWDA.—19. For supply of power to 19 sets at Kaggalipur and Karalu, estimates have been prepared. Another scheme for supply of power to 10 G.P. Sets at Heggundi and Harohalli has been sanctioned.

Sri A. V. NARASIMHA REDDY.—Will the Government expedite sanction of electricity to Kaggalipura and Karalu?

Dr. R. NAGAN GOWDA.—Yes.

Underground Water for agricultural operations.

Q.—543. Sri G. PAPANNA (Sidlaghatta and Chikballapur).—

Will the Government be pleased to state:—

(*a*) whether it has come to their notice that the agricultural operations are increasing year by year in the State on the strength of using the underground water;

(*b*) whether they have employed the experts to render their scientific suggestions in the matter of lifting the underground water; if not, whether it is not essential to employ such persons?

A.—Dr. R. NAGAN GOWDA (Minister for Agriculture).—

(*a*) Yes.

(*b*) (*i*) Yes.

(*ii*) Does not arise in view of reply to clause (*i*).

ಶ್ರೀ ಜಿ. ಪಾಪಣ್ಣ.—(ಬಿ) ಭಾಗದ ಪ್ರಶ್ನೆಗೆ ಉತ್ತರವಾಗಿ "ಹೌದು" ಎಂದು ಹೇಳಿದ್ದೀರಿ. ಇವರು ಯಾರು? ಇವರು ಯಾವ ಇಲಾಖೆಯಲ್ಲಿ ಕೆಲಸ ಮಾಡುತ್ತಾ ಇದ್ದಾರೆ? ಏನು ಕೆಲಸ ಮಾಡುತ್ತಿದ್ದಾರೆ?

Dr. R. NAGAN GOWDA.—We have got a special superintendent for I. P. sets. As a matter of fact, we are only dealing with surface wells and not the deep bore wells. Our information, so far as we have here, is that it has not been successful to have deep bore wells here.

ಶ್ರೀ ಜಿ. ಪಾಪಣ್ಣ.—ಅವರು ಬರೀ electricity sanction ಮಾಡುವ ಮಟ್ಟಿಗೆ ಅಧಿಕಾರವನ್ನು ಹೊಂದಿದ್ದಾರೆ. ಆದರೆ ಭೂಗರ್ಭದಲ್ಲಿರುವ ನೀರಿನ ವಿಷಯದಲ್ಲಿ ಅವರಿಗೆ ಏನು ಪರಿಶ್ರಮವಿದೆ?

Dr. R. NAGAN GOWDA.—As I said, regarding bore wells, quite a large amount of work has been done by our Public Works Department and the results have not been encouraging and so, we are only helping people in other ways, that is, supplying and giving information about electric supply, etc. So far as deep bore wells are concerned, nobody is now working.

ಶ್ರೀ ಜಿ. ಪಾಪಣ್ಣ.—Surface wellಗಳ ವಿಷಯದಲ್ಲಿ ಶಾಸ್ತ್ರೀಯವಾಗಿ ಯಾರು ಸಲಹೆಕೊಡುತ್ತಾರೆ? Technical people ಇದ್ದಾರೆಯೇ? ಎಲ್ಲಿ ಬಾವಿ ತೋಡಿದರೆ ನೀರು ಬರುತ್ತದೆ? ಎಲ್ಲಿ ಹೆಚ್ಚಾಗಿ ತೋಡಿದರೆ water table ಕೆಳಗೆ ಹೋಗುತ್ತದೆ ಎಂಬ ವಿಚಾರದಲ್ಲಿ ಸಲಹೆ ಕೊಡುವುದಕ್ಕೆ ಯಾರಾದರೂ ಇದ್ದಾರೆಯೇ?

Dr. R. NAGAN GOWDA.—I do not think it is necessary. Water divining is done very well by Voddars. We do not have anybody right now and we do not have that information.

ಶ್ರೀ ಜಿ. ಪಾಪಣ್ಣ.—ಹಾಗೆ ಬಿಡುವುದರಿಂದ water table ಬಹಳ ಕೆಳಗೆ ಹೋಗಿ ರೈತರಿಗೆ ಬಹಳವಾಗಿ ಪೆಚ್ಚಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅದನ್ನು ತಡೆಗಟ್ಟುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಡಾ॥ ಆರ್. ನಾಗನಗೌಡ.—ಮಳೆ ಕಡಿಮೆಯಾದರೆ ನೀರು ಕೆಳಗೆ ಹೋಗುತ್ತದೆ. ಮಳೆ ಬಂದ ಮೇಲೆ ನೀರು ಮೇಲಕ್ಕೆ ಬರುತ್ತದೆ.

ಶ್ರೀ ವಿ. ಮುನಿಯಪ್ಪ.—Open wellsನಲ್ಲಿ ನೀರು ಕಮ್ಮಿ ಆಗುತ್ತಾ ಬರುವುದರಿಂದ open wellsಗಳಲ್ಲಿ bore wellsಗಳನ್ನು ತೆಗೆದು 50—100 ಅಡಿ ಕೆಳಗಿರುವ ನೀರನ್ನು ಮೇಲಕ್ಕೆ ತಂದುಕೊಡುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಈ ಸಭೆಯಲ್ಲಿ ಕೇಳಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

Dr. R. NAGAN GOWDA.—These bore wells are successful in a few areas, for instance, in Chitaldrug Town. But in other places where huge bore wells have